# ಅಂಬೇಡ್ಕರ್‌ವಾದಿ ಯಾರು?



**ಶಶಿಕುಮಾರ್**

ಮೇ 9, 2023. ಕೆನಡಾದ ಆಲ್ಬರ್ಟಾ ಪ್ರಾಂತ್ಯದ ಪ್ರಮುಖ ನಗರವಾದ ಕ್ಯಾಲ್ಗರಿಯಲ್ಲಿ ಬಾಬಾಸಾಹೇಬ್ ಡಾ. ಬಿ.ಆರ್. ಅಂಬೇಡ್ಕರ್ ಅವರ 132ನೇ ಜಯಂತಿ ಆಚರಣೆಯ ಸಂದರ್ಭ. ಒಂದೂವರೆ ಮಿಲಿಯನ್ ಜನಸಂಖ್ಯೆಯಿರುವ ಈ ನಗರದ ಕ್ಯಾಲ್ಗರಿ ವಿಶ್ವವಿದ್ಯಾಲಯದಲ್ಲಿ 'ಅಂಬೇಡ್ಕರೈಟ್ಸ್ ಇಂಟರ್ ನ್ಯಾಶನಲ್ ಮಿಶನ್ ಸೊಸೈಟಿ', 'ಗುರು ರವಿದಾಸ್ ಸೊಸೈಟಿ' ಹಾಗೂ 'ಅಂಬೇಡ್ಕರೈಟ್ ಇಂಟರ್ ನ್ಯಾಶನಲ್ ಕೋಆರ್ಡಿನೇಶನ್ ಸೊಸೈಟಿ ಗೋಲ್ಡನ್' ಜಂಟಿಯಾಗಿ ಆಯೋಜಿಸಿದ್ದ ಕಾರ್ಯಕ್ರಮವದು. ಕಾಕತಾಳೀಯವೆಂಬಂತೆ, 1916ರಲ್ಲಿ ಅದೇ ದಿನದಂದು ನ್ಯೂಯಾರ್ಕ್‌ನ ಕೊಲಂಬಿಯಾ ವಿಶ್ವವಿದ್ಯಾಲಯದ ವಿದ್ಯಾರ್ಥಿಯಾಗಿ 'ಕ್ಯಾಸ್ಟ್ಸ್ ಇನ್ ಇಂಡಿಯ: ದೇರ್ ಮೆಕ್ಯಾನಿಸಂ, ಜೆನೆಸಿಸ್ ಅಂಡ್ ಡೆವಲಪ್‌ಮೆಂಟ್' ಪ್ರಬಂಧವನ್ನು ಅಂಬೇಡ್ಕರ್ ಮಂಡಿಸಿದ್ದರು. ಆ ದಿನ ಸಂಜೆ ಬೃಹತ್ ಸಭಾಂಗಣದಲ್ಲಿ ಆಯೋಜಿಸಲಾಗಿದ್ದ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಪಂಜಾಬಿ ರವಿದಾಸೀಯ ಸಮುದಾಯ ಹಾಗೂ ಮರಾಠಿ ನವ ಬೌದ್ಧ ಸಮುದಾಯಗಳ ಉಪಸ್ಥಿತಿ ಎದ್ದು ಕಾಣುತ್ತಿತ್ತು. ಉಳಿದ ದಲಿತ ಸಮುದಾಯಗಳು ಕೆನಡಾದಲ್ಲಿ ವಿರಳಾತಿವಿರಳ. ಆಲ್ಬರ್ಟಾ ಪ್ರಾಂತ್ಯದ ರಾಜಧಾನಿಯಾದ ಎಡ್ಮಂಟನ್‌ನಲ್ಲಿರುವ ಆಲ್ಬರ್ಟಾ ವಿಶ್ವವಿದ್ಯಾಲಯದ ಇಂಗ್ಲಿಷ್ ಹಾಗೂ ಫಿಲ್ಮ್ ಅಧ್ಯಯನ ವಿಭಾಗದಲ್ಲಿ 'ಕರ್ನಾಟಕದ ದಲಿತ ಚಳವಳಿ ಹಾಗೂ ಸಾಹಿತ್ಯ' ಕುರಿತು ಸಂಶೋಧನೆ ಮಾಡುತ್ತಿರುವ ನನಗೆ, ಅದೇ ವಿಶ್ವವಿದ್ಯಾಲಯದ ಪದವೀಧರ ಹಾಗೂ ಎಡ್ಮಂಟನ್ ನಿವಾಸಿ, ಸದ್ಯ ಮ್ಯಾಕ್‌ಎವನ್ ವಿಶ್ವವಿದ್ಯಾಲಯದ ಪ್ರೊಫೆಸರ್ ಆಗಿರುವ ಯುವರಾಜ್ ನರ್ನಾವರೆಯವರು ಎರಡು ವಾರಗಳ ಮುಂಚೆಯೇ ಆಹ್ವಾನವಿತ್ತಿದ್ದರು. ಎರಡು ವರ್ಷಗಳ ಹಿಂದೆ ಇ-ಮೇಲ್ ಮೂಲಕ ಪರಿಚಯವಾಗಿದ್ದ ಅವರನ್ನು ಮುಖತಃ ಭೇಟಿಯಾಗಿದ್ದು ಅದೇ ಮೊದಲು. ಸ್ನೇಹಜೀವಿಯಾದ ಅವರು ಕಾರ್ಯಕ್ರಮದ ಹಿಂದಿನ ದಿನವಾದ 'ಬುದ್ಧ ಪೂರ್ಣಿಮ'ದಂದು ಅವರ ಕುಟುಂಬದೊಂದಿಗೆ ನನ್ನನ್ನೂ ಕರೆದುಕೊಂಡು ಹೊರಟರು. ಎಡ್ಮಂಟನ್‌ನಿಂದ ಕ್ಯಾಲ್ಗರಿಗೆ 300 ಕಿ.ಮೀ. ದೂರವಾದ್ದರಿಂದ ಕಾರಿನಲ್ಲಿ ಮೂರು ಗಂಟೆಗಳು ಹಿಡಿವ ಆ ಪ್ರಯಾಣದಲ್ಲಿ ದಾರಿಯುದ್ದಕ್ಕೂ ಮಾತುಕತೆ ನಿರಂತರವಾಗಿ ಸಾಗಿತ್ತು. ಮೇಲ್ನೋಟಕ್ಕೆ ಅದೊಂದು ಆಪ್ತ ಮಾತುಕತೆಯಂತೆ ಕಂಡರೂ, ಅದು ಅಷ್ಟಕ್ಕೇ ಸೀಮಿತವಾಗಿರಲಿಲ್ಲ – 'ಪರ್ಸನಲ್ ಈಸ್ ಪೊಲಿಟಿಕಲ್' ಎಂದು ಹೇಳುವ ಹಾಗೆ. ದಲಿತರು, ಬೌದ್ಧರು, ಅಂಬೇಡ್ಕರ್ ವಾದಿಗಳು, ರವಿದಾಸೀಯರು ಮುಂತಾದ ಪರಿಕಲ್ಪನೆಗಳ ಸುತ್ತ ನಡೆದ ಮಾತುಕತೆ ನನ್ನ ಮನದಾಳದಲ್ಲಿ ಅನೇಕ ಪ್ರಶ್ನೆಗಳ ಜಲತರಂಗವನ್ನು ಏಳಿಸಿತು. ದಲಿತರು, ಬೌದ್ಧರು, ಅಂಬೇಡ್ಕರ್‌ವಾದಿಗಳು, ರವಿದಾಸೀಯರು ಅಂದರೆ ಬೇರೆಬೇರೆಯೇ ಅಥವಾ ಒಬ್ಬರೇ